## ದೇಶದ ಹದಿನೇಳು ರಾಜ್ಯಗಳ ಸುಮಾರು 1.30 ಲಕ್ಷ ಜನರಿಗೆ ಜಾಗೃತಿ ಸಂದೇಶ

# ಎನ್‌ಐಟಿಕೆಗೆ ತಲುಪಿದ ಎನರ್ಜಿ ಸ್ವರಾಜ್ ಯಾತ್ರೆ

ಮಂಗಳೂರು: ಸೌರ ಶಕ್ತಿಯನ್ನು ಅಳವಡಿಸಿಕೊಳ್ಳುವ ಕಡೆಗೆ ಸಾರ್ವಜನಿಕ ಚಳವಳಿ ಧ್ಯೇಯದೊಂದಿಗೆ ಸೋಲಾರ್ ಮ್ಯಾನ್ ಆಫ್ ಇಂಡಿಯಾ- ಸೋಲಾರ್ ಗಾಂಧಿ ಪ್ರೊ.ಚೇತನ್ ಸಿಂಗ್ ಸೋಲಂಕಿ ಅವರ 2020ರ ನವೆಂಬರ್‌ನಲ್ಲಿ ಆರಂಭಗೊಂಡ ಸೋಲಾರ್ ಎನರ್ಜಿ ಸ್ವರಾಜ್ ಯಾತ್ರೆ ಬುಧವಾರ ಎನ್‌ಐಟಿಕೆ ತಲುಪಿದೆ.

2030ರವರೆಗೆ ಸುಮಾರು ಹನ್ನೊಂದು ವರ್ಷಗಳ ಕಾಲ ನಡೆಯಲಿರುವ ಈ ಯಾತ್ರೆಯಲ್ಲಿ ಪ್ರೊ.ಸೋಲಂಕಿ ಅವರು 11 ವರ್ಷಗಳ ಕಾಲ ಮನೆಗೆ ಹಿಂತಿರುಗದೆ ಸೋಲಾರ್ ಬಸ್‌ನಲ್ಲೇ ತಮ್ಮ ಜೀವನ ನಡೆಸುವ ಪ್ರತಿಜ್ಞೆ ಕೈಗೊಂಡಿದ್ದಾರೆ.

ಎನ್‌ಐಟಿಕೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರೊ.ಸೋಲಂಕಿ, ಹವಾಮಾನ ಬದಲಾಗುತ್ತಿಲ್ಲ, ನಮ್ಮಿಂದ ಬದಲಾಗಿದೆ. ಶಕ್ತಿಯ ಬಳಕೆಯನ್ನು ಹೇಗೆ ಕಡಿಮೆ ಮಾಡುವುದು ಎಂಬುದನ್ನು ಪ್ರತಿಯೊಬ್ಬರು ಅರ್ಥೈಸಬೇಕಾಗಿದೆ. ಭವಿಷ್ಯದಲ್ಲಿ ಹವಾಮಾನ ಬದಲಾವಣೆಯು ಅತ್ಯಂತ ಗಂಭೀರ ಸಮಸ್ಯೆಯಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಶಕ್ತಿಯ ಮೂಲಗಳನ್ನು ರಕ್ಷಿಸಬೇಕಾಗಿದೆ. ಅಗಾಧ ಶಕ್ತಿಯ ಮೂಲ ಸೌರಶಕ್ತಿಯ ಯೋಗ್ಯ ಬಳಕೆಯಿಂದ ಆಧುನಿಕ ಜಗತ್ತಿನ ಶಕ್ತಿಯ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿದ್ದು, ಜಗತ್ತಿಗೆ ಸೌರಶಕ್ತಿಯ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದರು.

ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ.ಎಸ್. ಎಂ.ಕುಲಕರ್ಣಿ, ರಿಜಿಸ್ಟ್ರಾರ್ ರವೀಂದ್ರ ನಾಥ್ ಕೆ., ಜಂಟಿ ರಿಜಿಸ್ಟ್ರಾರ್ ರಾಮ್‌ಮೋಹನ್ ವೈ, ಡೀನ್ ಅಕಾಡೆಮಿಕ್ ಡಾ. ವಿದ್ಯಾಶೆಟ್ಟಿ, ಅಸೋಸಿಯೇಟ್ ಡೀನ್‌ಗಳಾದ ಪ್ರೊ. ಕಟ್ಟಿ ಮಣಿ, ಡಾ. ಹರಿಪ್ರಸಾದ್ ದಾಸರಿ ಮೊದಲಾದವರು ಉಪಸ್ಥಿತರಿದ್ದರು.



ಸೋಲಾರ್ ಎನರ್ಜಿ ಸ್ವರಾಜ್ ಯಾತ್ರೆಗೆ ಬುಧವಾರ ಎನ್‌ಐಟಿಕೆ ವತಿಯಿಂದ ಸ್ವಾಗತ ಕೋರಲಾಯಿತು.ಎನ್ ಐಟಿಕೆ ಪ್ರಭಾರ ನಿರ್ದೇಶಕ ಎಂ. ಕುಲಕರ್ಣಿ, ರಿಜಿಸ್ಟ್ರಾರ್ ರವೀಂದ್ರನಾಥ್, ರಾಮ್‌ಮೋಹನ್ ಪೈ ಇದ್ದರು.

### 30 ದೇಶಗಳಲ್ಲಿ ಸಂದೇಶ ಯಾತ್ರೆ

ಸೋಲಾರ್ ಗಾಂಧಿ ಖ್ಯಾತಿಯ ಪ್ರೊ. ಚೇತನ್ ಸಿಂಗ್ ಸೋಲಂಕಿ ಅವರು ತನ್ನ ಎನರ್ಜಿ ಸ್ವರಾಜ್ ಯಾತ್ರೆಯ ಮೂಲಕ ಪ್ರಪಂಚಾದ್ಯಂತ 30 ದೇಶಗಳಲ್ಲಿ ಸೌರಶಕ್ತಿಯ ಬಗ್ಗೆ ಸಂದೇಶ ಪ್ರಚುರಪಡಿಸಲಿರುವರು. ಈಗಾಗಲೇ 36 ಸಾವಿರ ಕಿ..ಮೀ ಗಿಂತ ಹೆಚ್ಚು ಈ ಯಾತ್ರೆ ಸಂಚರಿಸಿದ್ದು, 17 ರಾಜ್ಯಗಳಲ್ಲಿ ಸುಮಾರು 1 ಲಕ್ಷದ 30 ಸಾವಿರ ಜನರನ್ನು ತಲುಪಿದೆ. ವಿಶ್ವದ 100 ಕೋಟಿಗೂ ಹೆಚ್ಚು ಜನರಲ್ಲಿ ಇಂಧನ ಸಾಕ್ಷರತೆಉತ್ತೇಜಿಸುವುದು, 1 ಕೋಟಿ ಕುಟುಂಬಗಳು 100ಶೇ. ಸೌರಶಕ್ತಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು ಈ ಯಾತ್ರೆಯ ಮುಖ್ಯ ಉದ್ದೇಶ.

Hosa Diganta, Date: 23/02/23 p, no - 07